ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹಾನಗಲ್

**ಸಿ. ಸಿ. ನಂ. 151/2023**

| | | | | |
|---|---|---|---|---|
| ಸಾಕ್ಷಿಧಾರರ ಹೆಸರು | : | ವಿನೋದ ಕಲಾಲ | ಪಿಡಬ್ಲ್ಯೂ | 4 |
| ತಂದೆ:ಗಂಡನ ಹೆಸರು | : | ಅಶೋಕ | ಸಿಡಬ್ಲ್ಯೂ | 10 |
| ವಯಸ್ಸು | : | 32 ವರ್ಷ | | |
| ಉದ್ಯೋಗ | : | ಹೋಟೇಲ್ ಕೆಲಸ | | |
| ವಾಸಸ್ಥಳ | : | ಹಾನಗಲ್ | | |

ದಿನಾಂಕ **06.03.2025** ರಂದು ಸಾಕ್ಷಿಧಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ: ಸಹಾಯಕ ಸರಕಾರಿ ಅಭಿಯೋಜಕರಿಂದ

ಆರೋಪಿ ನನ್ನ ಸಹೋದರ. ನಾನು ಶ್ರೀ ರೇಣುಕಾ ಡಾಬಾವನ್ನು ನಡೆಸುತ್ತೇನೆ. ನಾನು ಮತ್ತು ಆರೋಪಿ ಸೇರಿಯೇ ಹೋಟೆಲ್ ನಡೆಸುತ್ತೇವೆ. ಕರಗುದರಿ ಕ್ರಾಸ್ ಬಳಿ ಬರುತ್ತದೆ. ಸದರಿ ಡಾಬಾವನ್ನು ಜಮೀನು ಬಾಡಿಗೆ ಪಡೆದು ನಡೆಸುತ್ತೇವೆ. ಅದನ್ನು ಚಾಸಾ-9 ರವರಿಂದ ಬಾಡಿಗೆ ಪಡೆದಿರುತ್ತೇವೆ. 2021 ರಿಂದ ಡಾಬಾ ನಡೆಸುತ್ತಿದ್ದೇನೆ. ಆರೋಪಿ ನಮ್ಮ ಹೊಟೇಲ್ ನಲ್ಲಿ ಸಾರಾಯಿ ಮಾರಾಟ ಮಾಡುತ್ತಿದ್ದರು. ಈ ವಿಚಾರವಾಗಿ ಪೋಲಿಸರು ನನ್ನನ್ನು ವಿಚಾರಣೆ ಮಾಡಿಲ್ಲ. ಸಾಕ್ಷಿಯು ಪೋಲಿಸರು ನೀಡಿದ ನೋಟಿಸನ್ನು ನೋಡಿ ಗುರುತಿಸಿರುತ್ತಾರೆ. ಪೋಲಿಸರು ಕೊಟ್ಟ ನೋಟಿಸಿಗೆ ನಾನು ಹೋಗಿ ಹಾಜರಾಗಿಲ್ಲ. ವಿಚಾರಣೆ ನೋಟಿಸಿಗೆ ನೀಡಿದ ಉತ್ತರವನ್ನು ಸಾಕ್ಷಿ ಗುರುತಿಸಿದ್ದು ಅದರ ಮೇಲಿನ ಸಹಿ ಗುರುತಿಸಿರುತ್ತಾರೆ. ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ.

ಪಾಟೀ ಸವಾಲು: ಆರೋಪಿ ಪರ ಶ್ರೀ ಎಫ್ ಎಚ್ ಕೆ ವಕೀಲರಿಂದ:

ಡಾಬಾದಲ್ಲಿ ಪೋಲಿಸರು ದಾಳಿ ಮಾಡಿದಾಗ ಆರೋಪಿ ಇರಲಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಇದ್ದೆ ಅಂತಾ ನುಡಿಯುತ್ತಾರೆ. ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ ಅಂತಾ ಸುಳ್ಳುಸಾಕ್ಷಿ ನುಡಿಯುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಪೋಲಿಸರೇ ಸಹಿ

ಮಾಡಿಸಿಕೊಂಡಿದ್ದಾರೆ ಅಂತಾ ನುಡಿಯುತ್ತಾರೆ. ಆರೋಪಿ ಯಾವುದೇ ಅಪರಾಧ ಮಾಡದೇ ಇದ್ದರೂ ಸಹ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**: ಮರುವಿಚಾರಣೆ : ಇಲ್ಲ.**

**( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

**Sd/-**

ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್